ಇರುವುದು. ಪರಿಶೀಲನೆಗೆ ಲಾ ಡಿಪಾರ್ಟ್‌ಮೆಂಟ್‌ನವರು ನಿಯಮಾವಳಿಗಳನ್ನು ಸ್ಕ್ರುಟಿನೈಜ್ ಮಾಡಿ ಕಳುಹಿಸಿದ್ದಾರೆ. ಮತ್ತು ಪಬ್ಲಿಕ್ ಅಬ್ಜೆಕ್ಷನ್ ಕರೆದಿದ್ದು ಅವರೂ ಸಹ ಕೊಟ್ಟಿದ್ದಾರೆ. ಈಗ ಇರುವುದೇನೆಂದರೆ, ನಿಮ್ಮ ಸರ್ಕಾರದಿಂದ ಆರ್ಡರ್ಸ್ ಅನ್ನು ರಿಲೀಸ್ ಮಾಡುವುದೊಂದೇ ಬಾಕಿ ಇರುವುದು, ನೋಟಿಫಿಕೇಶನ್ ಇಶ್ಯೂ ಮಾಡಬೇಕಷ್ಟೆ. ಅದನ್ನು ಇವೊತ್ತು ಮಧ್ಯಾಹ್ನ ಮಾಡಬಹುದಿತ್ತು ಅಥವಾ ನಿನ್ನೆಯೇ ಮಾಡಬಹುದಿತ್ತು. ನಾನು ಕೇಳಿರುವ ಪ್ರಶ್ನೆ ಮಾನ್ಯ ಸಚಿವರಿಗೆ ತಲುಪಿದ ತಕ್ಷಣ ಕ್ರಮ ಕೈಗೊಂಡು ಆರ್ಡರ್ಸ್ ಅನ್ನು ರಿಲೀಸ್ ಮಾಡಿ ಬಂದು ಉತ್ತರ ಹೇಳಿದ್ದರೆ ನನಗೆ ಸಂತೋಷವಾಗುತ್ತಿತ್ತು. ಆದರೆ, ಇನ್ನೂ ಕೂಡ 'ಪರಿಶೀಲನೆಯಲ್ಲಿದೆ ' ಎಂದು ಹೇಳುತ್ತಿದ್ದೀರಿ. ಇಂತಹ ಪ್ರಮುಖವಾದ ತಿರ್ಮಾನವನ್ನು ಹಿಂದಿನ ಸರ್ಕಾರ ತೆಗೆದುಕೊಂಡರೂ ತಾವು ಅದನ್ನು ನಾಲ್ಕೈದು ತಿಂಗಳುಗಳ ಕಾಲ ಇಟ್ಟುಕೊಂಡು ಕುಳಿತಿದ್ದೀರಿ. ನೋಟಿಫಿಕೇಶನ್ ಅನ್ನು ಇವೊತ್ತು ಮಧ್ಯಾಹ್ನ ಇಶ್ಯೂ ಮಾಡುತ್ತೀರಾ? ಅಥವಾ ನಾಳೆ ಮಾಡುತ್ತೀರಾ? ಎಂಬುದರ ಬಗ್ಗೆ ಹೇಳಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ಇದು ಅಂತಿಮ ಸ್ವರೂಪದಲ್ಲಿದ್ದು ಮಾನ್ಯ ಸದಸ್ಯರು ಹೇಳಿದಂತೆ ಇನ್ನೊಂದು ವಾರದಲ್ಲಿ ಇದರ ಅಧಿಸೂಚನೆ ಹೊರಡಿಸುತ್ತೇವೆ.

ಮಾಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳ ಅನುಷ್ಠಾನ

61 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತಸುವರೆ?

ಅ) *ರಾಜ್ಯದ ವಿವಿಧ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳು ಅನುಷ್ಠಾನಗೊಳ್ಳುವಲ್ಲಿ ವಿಳಂಬವಾಗುತ್ತಿರುವುದು ನಿಜವೆ?*

ಆ) *ನಿಜವಾದಲ್ಲಿ ಕಾರಣಗಳೇನು?*

ಇ) *ಸರ್ಕಾರ ಈ ಬಗ್ಗೆ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ?*

ಶ್ರೀಮತಿ ಮೋಟಮ್ಮ (ಮಾಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಿಂದ ಅನುಮೋದಿಸಲ್ಪಟ್ಟಿದೆ)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) -"-

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ 'ನಮ್ಮ ಮಗಳು ನಮ್ಮ ಶಕ್ತಿ ' ಎನ್ನುವ ಜನಪ್ರಿಯ ಯೋಜನೆ ಒಂದಿದ್ದು, ಸದರಿ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹ ಫಲಾನುಭವಿಗಳಿಂದ ಸಹಸ್ರಾರು ಅರ್ಜಿಗಳು ಈಗಾಗಲೇ ಬಂದಿದ್ದು, ಇವುಗಳನ್ನು ಇತ್ಯರ್ಥಗೊಳಿಸದೇ ವಿಳಂಬವಾಗುತ್ತಿರುವುದಕ್ಕೆ ಕಾರಣವೇನೆಂದು ತಿಳಿಸಬೇಕು.

ಶ್ರೀಮತಿ ಮೋಟಮ್ಮ: ಸನ್ಮಾನ್ಯ ಅಧ್ಯಕ್ಷರೆ, ಇದೊಂದು ಒಳ್ಳೆಯ ಯೋಜನೆಯಾಗಿದ್ದು, ಅಂಗನವಾಡಿಯಲ್ಲಿ ಕಲಿಯುತ್ತಿರುವ ಐದು ವರ್ಷದ ಮಗುವಿನ ಹೆಸರಿನಲ್ಲಿ 2,500.00 ರೂಪಾಯಿಗಳಿಗೆ ಎಲ್.ಐ.ಸಿ. ಪಾಲಿಸಿ ಮಾಡಿಕೊಡುತ್ತೇವೆ. ಇದರಿಂದ ಬರುವ ಬಡ್ಡಿ ಹಣ 200 ರೂಪಾಯಿಗಳು ಆರರಿಂದ ಒಂಭತ್ತು ವರ್ಷ ವಯಸ್ಸಿನ ಮಗುವಿನ ಓದಿಗೆ ಸಹಾಯವಾಗುತ್ತಿದೆ, ಅದೇ ರೀತಿ ಹತ್ತರಿಂದ ಹದಿಮೂರು ವರ್ಷಗಳ ವಯಸ್ಸಿನ ಮಕ್ಕಳಿಗೆ ವರ್ಷಕ್ಕೆ 300 ರೂಪಾಯಿಗಳ ಬಡ್ಡಿ ಹಣ ಬರುತ್ತದೆ ಮತ್ತು ಹದಿನಾಲ್ಕರಿಂದ ಹದಿನೇಳು ವರ್ಷದವರೆಗಿನ ಮಕ್ಕಳಿಗೆ 400 ರೂಪಾಯಿಗಳ ಬಡ್ಡಿ ಹಣ ಬರುತ್ತದೆ. ಅವರಿಂದ ಹದಿನೆಂಟು ವರ್ಷ ತುಂಬಿದಾಗ ಪಾಲಿನ ಮೇಲಿನ ಬಡ್ಡಿ ಹಣ 4,410 ರೂಪಾಯಿಗಳು ಬರುತ್ತದೆ. ಈ ಯೋಜನೆಯಡಿ ಸರ್ಕಾರ 1996-97ನೇ ಸಾಲಿನಲ್ಲಿ ಸುಮಾರು 25 ಲಕ್ಷ ರೂಪಾಯಿಗಳನ್ನು 1,000ದಷ್ಟು ಫಲಾನುಭವಿಗಳಿಗೆ ಒದಗಿಸಿಕೊಟ್ಟಿದ್ದು, 1997-98ರಲ್ಲಿ ಸುಮಾರು 14,610 ಮಕ್ಕಳಿಗೆ 3 ಕೋಟಿ 75 ಲಕ್ಷ ರೂಪಾಯಿಗಳ ಎಲ್.ಐ.ಸಿ. ಪಾಲಿಸಿ ಒದಗಿಸಿ ಕೊಟ್ಟಿದ್ದರೆ, 1998-99ರಲ್ಲಿ 17,966 ಮಕ್ಕಳಿಗೆ 4 ಕೋಟಿ 32 ಲಕ್ಷ ರೂಪಾಯಿಗಳ ಎಲ್.ಐ.ಸಿ. ಪಾಲಿಸಿ ಒದಗಿಸಿಕೊಟ್ಟಿದೆ. ಎಲ್.ಐ.ಸಿ. ಪಾಲಿಸಿ ಮಾಡಿಸಬೇಕಾದರೆ ಸಂಸ್ಥೆಯಲ್ಲಿರುವ ಕೆಲವಾರು ನ್ಯೂನತೆಗಳು ಅಥವಾ ತೊಂದರೆಗಳಿಂದಾಗಿ ಬಹಳಷ್ಟು ಮಕ್ಕಳಿಗೆ ಪಾಲಿಸಿ ಮಾಡುವುದಕ್ಕೆ ವಿಳಂಬ ಮಾಡಿದ್ದಾರೆ. ನಮ್ಮ ಸರ್ಕಾರ ಹೊಸದಾಗಿ ಅಧಿಕಾರಕ್ಕೆ ಬಂದ ನಂತರ ಹೆಣ್ಣುಮಕ್ಕಳಿಗಾಗಿ ಹಮ್ಮಿಕೊಂಡಿರುವ ಈ ಯೋಜನೆಯನ್ನು ಸಾಕಷ್ಟು ಒಳ್ಳೆಯ ರೀತಿಯಲ್ಲಿ ಕಾರ್ಯಗತಗೊಳಿಸಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಆದುದರಿಂದ, ಆದಷ್ಟು ಬೇಗ ಅರ್ಹ ಫಲಾನುಭವಿಗಳಿಗೆ ಎಲ್.ಐ.ಸಿ. ಪಾಲಿಸಿಯನ್ನು ತಲುಪಿಸುವಂಥ ವ್ಯವಸ್ಥೆ ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಯು.ಆರ್. ಸಭಾಪತಿ : 1997-98ನೇ ಸಾಲಿನಲ್ಲಿ ಸುಮಾರು 17,000 ಅರ್ಜಿಗಳು ಬಂದಿದ್ದರೆ ಈಗ 34,000 ಅರ್ಜಿಗಳು ಬಂದಿದ್ದು, ಎಲ್.ಐ.ಸಿ. ಸಂಸ್ಥೆಯಲ್ಲಿರುವ ಕೆಲವು ನ್ಯೂನತೆಗಳಿಂದಾಗಿ ಅರ್ಹ ಫಲಾನುಭಾವಿಗಳೆಲ್ಲರಿಗೂ ಪಾಲಿಸಿ ವಿತರಿಸುವುದಕ್ಕಾಗಿಲ್ಲ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿರುವುದರಿಂದ, ಪಾಲಿಸಿಯನ್ನು ವಿತರಿಸುವುದಕ್ಕೆ ಒಂದು ಅವಧಿಯನ್ನು ಏನಾದರೂ ನಿಗದಿಪಡಿಸುತ್ತೀರಾ? ಈ ಕಾರ್ಯವನ್ನು ಎಷ್ಟು ಸಮಯದೊಳಗೆ ಮಾಡಿ ಮುಗಿಸುತ್ತೀರಿ? ಏಕೆಂದರೆ, ಇದರಲ್ಲಿ ಸುಮಾರು ಎಂಟು ಕೋಟಿ ರೂಪಾಯಿಗಳಷ್ಟು ಅನುದಾನ ಒಳಗೊಂಡಿರುವುದರಿಂದ ಸರಿಯಾದ ಸಮಯದಲ್ಲಿ ಅರ್ಹ ಮಕ್ಕಳಿಗೆ ಸದರಿ ಸೌಲಭ್ಯ ಒದಗಿಸಿಕೊಡದಿದ್ದರೆ ಮತ್ತು ಯೋಜನೆಯ ಅನುಷ್ಠಾನ ವಿಳಂಬವಾದಲ್ಲಿ ಎಲ್.ಐ.ಸಿ.ಯವರಿಗೆ ಕೊಟ್ಟಂಥ ಹಣ ನಮಗೆ ಯಾವ ರೀತಿಯಲ್ಲಿ ಹಿಂದಕ್ಕೆ ಬರುತ್ತದೆ? ಇದರ ಬಗ್ಗೆ ಜನರಿಗೆ ನಾವು ಏನೆಂದು ಉತ್ತರಿಸಬೇಕೆಂಬ ಬಗ್ಗೆ ಸ್ಪಷ್ಟ ಉತ್ತರವನ್ನು ನಿರೀಕ್ಷಿಸುತ್ತಿದ್ದೇನೆ.

ಶ್ರೀಮತಿ ಮೋಟಮ್ಮ : ನಾನು ಮೊದಲೇ ಹೇಳಿದಂತೆ ಈ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಈ ಯೋಜನೆ ಬಗ್ಗೆ ವಿಚಾರ ಮಾಡಿ ಎಲ್.ಐ.ಸಿ.ಯ ಸಂಬಂಧಪಟ್ಟ ಅಧಿಕಾರಿ ಮುಖ್ಯಸ್ಥರೊಂದಿಗೆ ಸಹ ಮಾತುಕತೆಯಾಡಿದ್ದು, ಅದಷ್ಟು ಬೇಗ ಅರ್ಹ ಫಲಾನುಭವಿಗಳೇನಿದ್ದಾರೆ

ಅವರಿಗೆ ಪಾಲಿಸಿ ಮಾಡಿಸಿಕೊಡುತ್ತೇವೆನ್ನುವ ಮಾತನ್ನು ಹೇಳಿರುವುದರಿಂದ ಪ್ರಸಕ್ತ ವರ್ಷ ಮುಗಿಯುವುದರೊಳಗೆ ಈ ಯೋಜನೆಯನ್ನು ಸಂಪೂರ್ಣ ಅನುಷ್ಠಾನಗೊಳಿಸುವುದಕ್ಕೆ ಒತ್ತಾಯ ಮಾಡುತ್ತೇವೆ.

ಸಂತೇಮರಹಳ್ಳಿಯಲ್ಲಿ ಬಸ್ ನಿಲ್ದಾಣದ ನಿರ್ಮಾಣ

68 - ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಹಳ್ಳಿ) : ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಾಮರಾಜನಗರ ತಾಲ್ಲೂಕು, ಸಂತೇಮರಹಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಸರ್ಕಾರಿ ಬಸ್ಸುಗಳು ಸಂಚರಿಸುತ್ತವೆ, ಮುಖ್ಯ ರಸ್ತೆಯಲ್ಲಿ ಹಾದು ಹೋಗುವ ಬಸ್ಸುಗಳ ಸಂಖ್ಯೆ ಎಷ್ಟು?*

ಆ) *ಕ್ಷೇತ್ರದ ವ್ಯಾಪ್ತಿಯಲ್ಲಿ ಗ್ರಾಮಗಳಲ್ಲಿ ನಿಲುಗಡೆ ಮಾಡಿ ಗ್ರಾಮಗಳಲ್ಲಿಯೇ ತಂಗುವ ಬಸ್ಸುಗಳ ಸಂಖ್ಯೆ ಎಷ್ಟು?*

ಇ) *ಯಾವ ಯಾವ ಗ್ರಾಮಗಳಲ್ಲಿ ಸರ್ಕಾರಿ ಬಸ್ಸುಗಳು ಸಂಪರ್ಕಿಸುತ್ತವೆ, ಹೊಸದಾಗಿ ಸಂತೇಮರಹಳ್ಳಿ ಕ್ಷೇತ್ರದ ವ್ಯಾಪ್ತಿಯ ಗ್ರಾಮಗಳಲ್ಲಿ ಸಂಚರಿಸಲು ಸರ್ಕಾರಿ ಬಸ್ಸುಗಳು ಮಂಜೂರಾಗಿವೆಯೇ? ಹಾಲಿ ಇದ್ದು ಸ್ಥಗಿತಗೊಂಡಿರುವ ಬಸ್ಸುಗಳ ಲೈನು ಯಾವುದು?*

ಈ) *ಸಂತೇಮರಹಳ್ಳಿಯು ಮೈಸೂರು, ನರಸೀಪುರ, ಕೊಳ್ಳೇಗಾಲ, ಯಳಂದೂರು, ನಂಜನಗೂಡು, ಚಾಮರಾಜನಗರ ಈ ಪ್ರದೇಶಗಳಿಗೆ ಸಂಚರಿಸುವ ಬಸ್ಸುಗಳ ಕೇಂದ್ರ ಸ್ಥಾನವಾಗಿದ್ದು ಬಸ್ ನಿಲ್ದಾಣ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ? ಇದ್ದಲ್ಲಿ, ಯಾವಾಗ ನಿಲ್ದಾಣ ಕಾರ್ಯ ಪ್ರಾರಂಭವಾಗುವುದು?*

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು)

ಅ) ಸಂತೇಮರಹಳ್ಳಿ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರತಿದಿನ ಸಂಸ್ಥೆಯ 20 ಬಸ್ಸುಗಳು ಆಚರಣೆಯಲ್ಲಿವೆ. 29 ಬಸ್ಸುಗಳು ಮುಖ್ಯ ರಸ್ತೆಯಲ್ಲಿ ಆಚರಣೆಯಲ್ಲಿವೆ.

ಆ) ಸಂತೆಮರಹಳ್ಳಿ ಕ್ಷೇತ್ರ ವ್ಯಾಪ್ತಿಯಲ್ಲಿ ಸಂಸ್ಥೆಯ 6 ಬಸ್ಸುಗಳು ರಾತ್ರಿ ವಸತಿಯನ್ನು ಹೊಂದಿರುತ್ತವೆ. ಆ ಗ್ರಾಮಗಳೆಂದರೆ, ತರಡೆಲೆ, ಹಳೇಪುರ, ದೇವನೂರು, ಕುದೇರು (ಎರಡು ಬಸ್ಸುಗಳು) ಮತ್ತು ಉಮ್ಮತ್ತೂರು.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸಂತೇಮರಳ್ಳಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳ ಪೈಕಿ 11 ಹಳ್ಳಿಗಳಿಗೆ ಸಾರಿಗೆ ಸೌಕರ್ಯವನ್ನು ಕಲ್ಪಿಸಿದೆ. ಆ ಹಳ್ಳಿಗಳೆಂದರೆ, ಕುದೇರು, ಉಮ್ಮತ್ತೂರು, ಸಂತೇಮರಳ್ಳಿ, ಕವಲಂದೆ, ನೇರಳೇ, ಹಳೇಪುರ ತರಡಲೆ, ಮಾಂಬಳ್ಳಿ